# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572 103

ಸಂಖ್ಯೆ :ತುವಿ:ವಿ.ವಿ.ಪ/ಸಿಂ.ವಿ/2022-23/6826 ದಿನಾಂಕ: 27.03.2023

ಇವರಿಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯರೆ,

**ವಿಷಯ: 2022-23ನೇ ಸಾಲಿನ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತು ಸಭೆಯ ಪೂರ್ವಭಾವಿ ಕಾರ್ಯಸೂಚಿಗಳನ್ನು ಕಳುಹಿಸುತ್ತಿರುವ ಕುರಿತು.**

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತು ಸಭೆಯನ್ನು **ದಿನಾಂಕ:30.03.2023ರ ಗುರುವಾರ 10:30 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಡಾ. ಜಗದಾಂಬ ಚಿವುಕುಲ ಕಟ್ಟಡ, ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು-572103** ಇಲ್ಲಿ ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಲಿರುವ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

27.3

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಅಡಕ: ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತು ಸಭೆಯ ಕಾರ್ಯಸೂಚಿಗಳು

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103


**ಸಭಾ ಸಂಖ್ಯೆ: ಸಾ.ವಿ.ವಿ.ಪ–02** **ದಿನಾಂಕ: 30.03.2023** **ಸಮಯ: ಬೆಳಿಗ್ಗೆ: 10.30**

**2022–23ನೇ ಸಾಲಿನ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ಪೂರ್ವಭಾವಿ ಕಾರ್ಯಸೂಚಿಗಳು**

| ಕ್ರ. ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| | | **ಹಣಕಾಸು ವಿಭಾಗ** | |
| 1. | 2022–23.ಸಾ.ವಿ.ವಿ.ಪ–02 ಹ.ವಿ–01 | 2022–23ನೇ ಸಾಲಿನ ವ್ಯವಹಾರಿಕ ಆಯವ್ಯಯದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿ ಮೊತ್ತವನ್ನು ಮರುಹಂಚಿಕೆ ಮಾಡಿಕೊಂಡಿರುವ ಬಗ್ಗೆ – ಸ್ಥಿರೀಕರಣ ಕೋರಿ. | 1 |
| 2. | 2022–23.ಸಾ.ವಿ.ವಿ.ಪ–02 ಹ.ವಿ–02 | 2023–24ನೇ ಸಾಲಿನ ವ್ಯವಹಾರಿಕ ಆಯ–ವ್ಯಯವನ್ನು ಅನುಮೋದಿಸುವ ಕುರಿತು. | 2 |
| 3. | 2022–23.ಸಾ.ವಿ.ವಿ.ಪ–02 ಹ.ವಿ–03 | ಸನ್ನದು ಲೆಕ್ಕ ಪರಿಶೋಧಕರಿಂದ ಸಿದ್ದಪಡಿಸಲಾದ 2021–22ನೇ ಸಾಲಿನ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸುವ ಕುರಿತು. | 3 |
| | | **ಶೈಕ್ಷಣಿಕ ವಿಭಾಗ** | |
| 4. | 2022–23.ಸಾ.ವಿ.ವಿ.ಪ–02 ಶೈ.ವಿ.–01 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಂಡಳಿ ಕುರಿತಾಗಿ ಪರಿನಿಯಮಾವಳಿ ರಚಿಸಿರುವ ಕುರಿತು. | 4 |
| 5. | 2022–23.ಸಾ.ವಿ.ವಿ.ಪ–02 ಶೈ.ವಿ.–02 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಫ್ ಪ್ರಾಕ್ಟೀಸ್ ಕುರಿತಾಗಿ ಪರಿನಿಯಮಾವಳಿ ರಚಿಸುವ ಕುರಿತು. | 5 |
| 6. | 2022–23.ಸಾ.ವಿ.ವಿ.ಪ–02 ಶೈ.ವಿ.–03 | ಇಂದಿರಾಗಾಂಧಿ ರೂರಲ್ ಓಪನ್ ಸ್ಕೂಲಿಂಗ್, ಹುಬ್ಬಳ್ಳಿಯ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಗೆ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಪದವಿಯನ್ನು ಪಡೆಯಲು ಅವಕಾಶ ನೀಡಲು ಕೋರಿರುವ ಕುರಿತು. | 6 |
| 7. | 2022–23.ಸಾ.ವಿ.ವಿ.ಪ–02 ಶೈ.ವಿ.–04 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವ ಕುರಿತು. | 7 |
| 8. | 2022–23.ಸಾ.ವಿ.ಫಿ.ಪ–02 ಶೈ.ವಿ.–05 | Academic Reforms Committee ವರದಿಯನ್ನು Action Plan ಸಹಿತ ಮಂಡಿಸುವುದು. | 8 |
| 9. | 2022–23.ಸಾ.ವಿ.ವಿ.ಪ–02 ಶೈ.ವಿ.–06 | ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಿಗೆ ಒಂದೇ ಅಧ್ಯಯನ ಮಂಡಳಿಗಳನ್ನು ರಚಿಸುವ ಕುರಿತು. | 9 |
| 10. | 2022–23.ಸಾ.ವಿ.ವಿ.ಪ–02 ಶೈ.ವಿ.–07 | ಸ್ನಾತಕೋತ್ತರ ನಾಲ್ಕು ವಿಷಯಗಳ ಪಠ್ಯಕ್ರಮದ ಪರಿಷ್ಕರಣೆ ಕುರಿತು. | 10 |

| ವಿಷಯ ಸಂಖ್ಯೆ | ಹ.ವಿ.01: ಸಾ:ವಿವಿಪ–02 ದಿ:30.03.2023 |
|---|---|

ವಿಷಯ: 2022–23ನೇ ಸಾಲಿನ ವ್ಯವಹಾರಿಕ ಆಯವ್ಯಯದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿ ಮೊತ್ತವನ್ನು ಮರುಹಂಚಿಕೆ ಮಾಡಿಕೊಂಡಿರುವ ಬಗ್ಗೆ–ಸ್ಥಿರೀಕರಣ ಕೋರಿ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022–23 ನೇ ಸಾಲಿನ ವ್ಯವಹಾರಿಕ ಆಯವ್ಯಯದ ವೆಚ್ಚಗಳ ಲೆಕ್ಕಶೀರ್ಷಿಕೆಗಳಲ್ಲಿ ನಿಗದಿಪಡಿಸಲಾದ ಅನುದಾನ ಮುಕ್ತಾಯವಾದ ಕಾರಣ, ಅನುದಾನ ಲಭ್ಯವಿರುವ Capital Expenditure ನ ಕ್ರಮ ಸಂಖ್ಯೆ 13 ರ ಲೆಕ್ಕಶೀರ್ಷಿಕೆ ಸಂಖ್ಯೆ 08 (Machinery / Equipment / Computers Labs / Softwares / Internet Connection, CCTV, Firewalls / Antivirus, Vehicles and Other Basic Administrative Facilities) ರಿಂದ ಈ ಕೆಳಕಂಡ ವಿವರಗಳಂತೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಅನುದಾನವನ್ನು ಮರುಹಂಚಿಕೆ ಮಾಡಿಕೊಳ್ಳಲಾಗಿರುತ್ತದೆ.

| ಕ್ರಮ ಸಂಖ್ಯೆ | ನಿಗದಿಪಡಿಸಲಾದ ಲೆಕ್ಕಶೀರ್ಷಿಕೆ | ನಿಗದಿಪಡಿಸಲಾಗಿದ್ದ ಮೊತ್ತ (ಲಕ್ಷಗಳಲ್ಲಿ) | ಹೆಚ್ಚುವರಿಯಾಗಿ ವರ್ಗಾವಣೆ ಮಾಡಿಕೊಳ್ಳಲಾದ ಮೊತ್ತ (ಲಕ್ಷಗಳಲ್ಲಿ) |
|---|---|---|---|
| 01 | **10**-Consultancy Fees/Audit Charges | 15.00 | 15.00 |
| 02 | **11**-University Programmes | 10.00 | 20.00 |
| 03 | **21**-Miscellaneous expenses | 25.00 | 25.00 |
| 04 | **33**-UG Men & Women's Hostel Expenditure | 15.00 | 15.00 |
| 05 | **60**-Custodian, BOE, Squad, etc. | 30.00 | 25.00 |
| 06 | **114**-SCP-Programmes as per Kriyayojane | 30.00 | 10.00 |
| 07 | **116**-OBC Cell | 3.39 | 15.00 |
| | **Total Rs.** | **128.39** | **125.00** |

**ನಿರ್ಣಯ:** ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು **2022–23** ನೇ ಸಾಲಿನ ವ್ಯವಹಾರಿಕ ಆಯವ್ಯಯದ ವೆಚ್ಚಗಳ ಲೆಕ್ಕಶೀರ್ಷಿಕೆಗಳಲ್ಲಿ ನಿಗದಿಪಡಿಸಲಾದ ಅನುದಾನ ಮುಕ್ತಾಯವಾದ ಕಾರಣ, ಅನುದಾನ ಲಭ್ಯವಿರುವ **Capital Expenditure** ನ ಕ್ರಮ ಸಂಖ್ಯೆ 13 ರ ಲೆಕ್ಕಶೀರ್ಷಿಕೆ ಸಂಖ್ಯೆ 08 **(Machinery / Equipment / Computers Labs / Softwares / Internet Connection, CCTV, Firewalls / Antivirus, Vehicles and Other Basic Administrative Facilities)** ರಿಂದ ವಿವಿಧ ವೆಚ್ಚಗಳ ಲೆಕ್ಕಶೀರ್ಷಿಕೆಯಡಿಯಲ್ಲಿ ವರ್ಗಾವಣೆ ಮಾಡಿರುವ ಒಟ್ಟು ಮೊತ್ತ ರೂ. 125.00 ಲಕ್ಷಗಳಿಗೆ ಘಟನೋತ್ತರವಾಗಿ ಅನುಮೋದಿಸಿ ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು.

ಸದರಿ ವಿಷಯವನ್ನು ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

| ವಿಷಯ ಸಂಖ್ಯೆ: | ಹ.ವಿ.02::ಸಾ:ವಿವಿಪ–02 ದಿ:30.03.2023 |
|---|---|

ವಿಷಯ:– **2023–24ನೇ ಸಾಲಿನ ವ್ಯವಹಾರಿಕ ಆಯ–ವ್ಯಯವನ್ನು ಅನುಮೋದಿಸುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಯೋಜನೆ ಮತ್ತು ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ ಸರ್ಕಾರದಿಂದ ನಿಗಧಿಯಾದ ಅನುದಾನ ಮತ್ತು ವಿಶ್ವವಿದ್ಯಾನಿಲಯಕ್ಕೆ ಬರಬಹುದಾದ ಮೊತ್ತಕ್ಕೆ ಅನುಬಂಧದಲ್ಲಿ ಸಿದ್ದಪಡಿಸಿರುವ ವ್ಯವಹಾರಿಕ ಆಯ–ವ್ಯಯ (Operational Budget) ವನ್ನು ದಿನಾಂಕ:21.03.2023 ರಂದು ನಡೆಯುವ ದ್ವಿತೀಯ ಹಣಕಾಸು ಸಮಿತಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ: 2023–24 ನೇ ಸಾಲಿನ ವ್ಯವಹಾರಿಕ ಆಯವ್ಯಯ (Operational Budget) ವನ್ನು ಅನುಮೋದಿಸಿ ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು.**

**ಸದರಿ ವಿಷಯವನ್ನು ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.**

| ವಿಷಯ ಸಂಖ್ಯೆ: | ಹ.ವಿ.03:ಸಾ:ವಿವಿಪ–02 ದಿ:30.03.2023 |
|---|---|

**ವಿಷಯ:– ಸನ್ನದು ಲೆಕ್ಕಪರಿಶೋಧಕರಿಂದ ಸಿದ್ದಪಡಿಸಲಾದ 2021–22ನೇ ಸಾಲಿನ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ವಾರ್ಷಿಕಲೆಕ್ಕಪತ್ರಗಳನ್ನು ಅನುಮೋದಿಸುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಸರ್ಕಾರದಿಂದ ತುಮಕೂರು ವಿಶ್ವವಿದ್ಯಾನಿಲಯದ 2021–22ನೇ ಸಾಲಿನ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸಿ ತುರ್ತಾಗಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ **ಮೆ. ಬದರಿ ಮಧುಸೂದನ್ & ಶ್ರೀನಿವಾಸನ್, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು,** ಇವರಿಂದ ಸಿದ್ದಪಡಿಲಾದ 2021–22ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ:21.03.2023 ರಂದು ನಡೆಯುವ ದ್ವಿತೀಯ ಹಣಕಾಸು ಸಮಿತಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ: 2021–22ನೇ ಸಾಲಿನ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದಿಸಿ ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು.**

**ಸದರಿ ವಿಷಯವನ್ನು ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.**

| ವಿಷಯ ಸಂಖ್ಯೆ | 2022–23: ವಿ.ವಿ.ಪ–02: ಶೈವಿ :01 ದಿನಾಂಕ: 30.03.2023 |
|---|---|

**ವಿಷಯ : ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಂಡಳಿ ಕುರಿತಾಗಿ ಪರಿನಿಯಮಾವಳಿ ರಚಿಸಿರುವ ಕುರಿತು.**

***

ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆಯಂತೆ ಅಧ್ಯಯನ ಮಂಡಳಿಗಳ ಸಂಯೋಜನೆ, ಕಾರ್ಯವ್ಯಾಪ್ತಿ, ಕರ್ತವ್ಯ, ಅಧಿಕಾರಗಳ ಕುರಿತಾಗಿ ಪರಿನಿಯಮಾವಳಿ ಹೊಂದಿರುವುದು ಅಗತ್ಯವಾಗಿದೆ. ಈ ಸಂಬಂಧ, ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಂಡಳಿಗಳ ಕುರಿತಾಗಿ ಪರಿನಿಯಮಾವಳಿಯನ್ನು ರಚಿಸಿರುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23 : ವಿ.ವಿ.ಪ–02: ಶೈವಿ :02 ದಿನಾಂಕ: 30.03.2023 |
|---|---|

ವಿಷಯ : ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಫ್ ಪ್ರಾಕ್ಟೀಸ್ ಕುರಿತಾಗಿ ಪರಿನಿಯಮಾವಳಿ ರಚಿಸುವ ಕುರಿತು.

***

ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ವಿದ್ಯಾರ್ಥಿಗಳಿಗೆ ಕೌಶಲ್ಯಾಧಾರಿತ ಶಿಕ್ಷಣ ನೀಡುವುದು ಅಗತ್ಯವಾಗಿದೆ. ಉದ್ಯೋಗಾಧಾರಿತ ಶಿಕ್ಷಣ ಸಾಮಾನ್ಯ ಶಿಕ್ಷಣದ ಜೊತೆಗೆ ಸೇರಲು ಶಿಕ್ಷಣ ಸಂಸ್ಥೆ ಹಾಗೂ ಇಂಡಸ್ಟ್ರೀ ನಡುವೆ ಸಹಯೋಗ ಅಗತ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ಕೌಶಲ್ಯ ಮೈಗೂಡಬೇಕಾದರೆ, ವಿದ್ಯಾರ್ಥಿಗಳು ಉದ್ಯೋಗದಾತರಾಗಿ ಹಾಗೂ ಇಂಡಸ್ಟ್ರಿಗಳು ವಿದ್ಯಾರ್ಥಿಗಳಂತೆ ಯೋಚಿಸಿದಾಗ ಇದು ಸಾಧ್ಯವಾಗುತ್ತದೆ. ಇಂಡಸ್ಟ್ರಿ ಹಾಗೂ ಇತರೆ ವೃತ್ತಿಪರ ತಜ್ಞರನ್ನು ಶಿಕ್ಷಣಸಂಸ್ಥೆಗಳಿಗೆ ಕರೆತರಲು ಯುಜಿಸಿ ಪ್ರೊಫೆಸರ್ ಆಫ್ ಪ್ರಾಕ್ಟೀಸ್ ಎಂಬ ಹೊಸಬಗೆಯ ಸ್ಥಾನವನ್ನು ಶಿಕ್ಷಣಸಂಸ್ಥೆಗಳಲ್ಲಿ ಹೊಂದುವಂತೆ ಸಲಹೆ ನೀಡಿದ್ದು, ಇದಕ್ಕೆ ಪೂರಕವಾಗಿ Academic Reforms Committee ಶಿಫಾರಸ್ಸು ನೀಡಿರುತ್ತದೆ. ಹಾಗೂ ಈ ವರದಿಯ ಕುರಿತಾಗಿ ಚರ್ಚಿಸಲು ಡೀನರನ್ನೊಳಗೊಂಡಂತೆ ನಡೆದ ಸಭೆಯ ನಡಾವಳಿಯ ಶಿಫಾರಸ್ಸಿನಂತೆ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಫ್ ಪ್ರಾಕ್ಟೀಸ್ ಕುರಿತಾಗಿ ಪರಿನಿಯಮಾವಳಿ ರಚಿಸಲಾಗಿದೆ.

ಈ ಸಂಬಂಧ ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23 : ವಿ.ವಿ.ಪ–02: ಶೈವಿ :03 ದಿನಾಂಕ: 30.03.2023 |
|---|---|

**ವಿಷಯ : ಇಂದಿರಾಗಾಂಧಿ ರೂರಲ್ ಓಪನ್ ಸ್ಕೂಲಿಂಗ್, ಹುಬ್ಬಳ್ಳಿಯ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಗೆ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಪದವಿಯನ್ನು ಪಡೆಯಲು ಅವಕಾಶ ನೀಡಲು ಕೋರಿರುವ ಕುರಿತು.**

***

ಇಂದಿರಾಗಾಂಧಿ ರೂರಲ್ ಓಪನ್ ಸ್ಕೂಲಿಂಗ್, ಹುಬ್ಬಳ್ಳಿಯ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಗೆ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಪದವಿಯನ್ನು ಪಡೆಯಲು ಅವಕಾಶ ನೀಡಲು ಕೋರಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರ ಅನುಮೋದನೆಯಮೇರೆಗೆ ಅಧ್ಯಕ್ಷರು, Equivalence ಸಮಿತಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಪತ್ರ ಬರೆಯಲಾಗಿ ದಿನಾಂಕ:15.03.2023 ರ ತಮ್ಮ ಪತ್ರದಲ್ಲಿ ಇಂದಿರಾಗಾಂಧಿ ರೂರಲ್ ಓಪನ್ ಸ್ಕೂಲಿಂಗ್, ಹುಬ್ಬಳ್ಳಿ ಇವರು ಕರ್ನಾಟಕದಿಂದ ಇಂದಿರಾಗಾಂಧಿ ಗ್ರಾಮೀಣ ಮುಕ್ತ ಶಾಲೆಯಿಂದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಅವಕಾಶ ನೀಡಬೇಕೆಂಬ ಮನವಿಯ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ಇಂದಿರಾಗಾಂಧಿ ರೂರಲ್ ಓಪನ್ ಸ್ಕೂಲಿಂಗ್ ಸಂಸ್ಥೆಯು ನೊಂದಾಯಿತ ಸಂಸ್ಥೆಯಾಗಿದ್ದು, ಅಧಿಕೃತ COBSE ಪಟ್ಟಿಯಲ್ಲಿರುವುದಿಲ್ಲ. ಆದಾಗ್ಯೂ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ/248/ಯುಆರ್‌ಸಿ/2021 ದಿನಾಂಕ:28.11.2022ರ ಪತ್ರ ಹಾಗೂ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಿರುವ ಬಗ್ಗೆ ತಿಳಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ವಯ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ **ವಿದ್ಯಾವಿಷಯಕ ಪರಿಷತ್**‌ನಲ್ಲಿ ಮಂಡಿಸಿ ಚರ್ಚಿಸಿ ಮುಂದಿನ ಕ್ರಮವಹಿಸಬಹುದೆಂದು ತಿಳಿಸಿರುತ್ತಾರೆ.

**ಈ ಸಂಬಂಧ ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.**

| ವಿಷಯ ಸಂಖ್ಯೆ | **2022–23 : ವಿ.ವಿ.ಪ–02: ಶೈವಿ :04 ದಿನಾಂಕ: 30.03.2023** |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವ ಕುರಿತು.**
**ಉಲ್ಲೇಖ:** ದಿನಾಂಕ:10.03.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 10.03.2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವ ಕುರಿತು ಕೆಳಕಂಡಂತೆ ನಿರ್ಣಯವಾಗಿರುತ್ತದೆ.

> **"ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವ ವಿಷಯದ ಕುರಿತು ಚರ್ಚಿಸಿದ ಸಭೆಯು ಡೀನರ ಸಮಿತಿಯ ಶಿಫಾರಸ್ಸಿನಂತೆ ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವಂತೆ ಹಾಗೂ ಸದರಿ ಸೆಂಟರ್‌ನ್ನು ನಿರ್ವಹಿಸಲು ಇಂಡಸ್ಟ್ರಿ ಹಿನ್ನೆಲೆಯುಳ್ಳ ಒಬ್ಬರನ್ನು ನೇಮಿಸಿ ನಿಯಮಾನುಸಾರ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು".**

ಮೇಲ್ಕಂಡ ನಿರ್ಣಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23 : ವಿ.ವಿ.ಪ–02: ಶೈವಿ :05 ದಿನಾಂಕ: 30.03.2023 |
|---|---|

ವಿಷಯ: Academic Reforms Committee ವರದಿಯನ್ನು Action Plan ಸಹಿತ ಮಂಡಿಸುವುದು ಕುರಿತು.

ಉಲ್ಲೇಖ: 1) Academic Reforms Committee ಅಧಿಸೂಚನೆ ದಿನಾಂಕ: 27.10.2022

2) Academic Reforms Committee ವರದಿಯ ಕುರಿತು Action Plan ಬಗ್ಗೆ ದಿನಾಂಕ: 08.02.2023 ರಂದು ನಡೆದ ಸಭೆಯ ನಡಾವಳಿ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಂಬಂಧ ಉಲ್ಲೇಖ(1)ರಲ್ಲಿ ಪ್ರೊ. ಮಾದೇಗೌಡ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾನಿಲಯ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಅಧಿಸೂಚಿಸಲಾಗಿತ್ತು. ಸದರಿ ಸಮಿತಿಯು ಸಲ್ಲಿಸಿದ ವರದಿಯ ಕುರಿತು ವಹಿಸಬೇಕಾದ ಕ್ರಮಗಳನ್ನು (Action Plan) ಚರ್ಚಿಸಲು ಉಲ್ಲೇಖ(2)ರಲ್ಲಿ ಸಭೆ ನಡೆದಿದ್ದು, ವಿಶ್ವವಿದ್ಯಾನಿಲಯದ ಡೀನರು, ನಿರ್ದೇಶಕರು(IQAC), ನಿರ್ದೇಶಕರು(PMEB) ಮತ್ತು ಘಟಕ ಕಾಲೇಜುಗಳ ಪ್ರಾಂಶುಪಾಲರನ್ನೊಳೊಂಡಂತೆ ಮಾನ್ಯ ಕುಲಪತಿಗಳ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23 : ವಿ.ವಿ.ಪ-02: ಶೈವಿ :06 ದಿನಾಂಕ: 30.03.2023 |
|---|---|

**ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಿಗೆ ಒಂದೇ ಅಧ್ಯಯನ ಮಂಡಳಿಗಳನ್ನು ರಚಿಸುವ ಕುರಿತು.**

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ನಾಲ್ಕು ವರ್ಷಗಳ ಸ್ನಾತಕ ಕಾರ್ಯಕ್ರಮಗಳಿದ್ದು, ಮೂರನೇ ವರ್ಷದಿಂದ Specialisation ಪತ್ರಿಕೆಗಳನ್ನು ನೀಡಬೇಕಾಗಿರುತ್ತದೆ. ಮುಂದುವರೆದು, ನಾಲ್ಕನೇ ವರ್ಷದ ಸ್ನಾತಕ ಕಾರ್ಯಕ್ರಮ ಮೊದಲನೇ ವರ್ಷದ ಸ್ನಾತಕೋತ್ತರ ಕಾರ್ಯಕ್ರಮಕ್ಕೆ ಸಮಾನವಾಗಿರಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಒಟ್ಟಾಗಿ ಒಂದೇ ಅಧ್ಯಯನ ಮಂಡಳಿ ಇದ್ದಲ್ಲಿ ನಾಲ್ಕನೇ ವರ್ಷದ ಸ್ನಾತಕ ಕಾರ್ಯಕ್ರಮ ಹಾಗೂ ಮೊದಲನೇ ವರ್ಷದ ಸ್ನಾತಕೋತ್ತರ ಕಾರ್ಯಕ್ರಮಗಳ Equivalency ಹೊಂದುವುದು ಸರಳವಾಗುವುದರಿಂದ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ನಿಯಮ 2000 ರನ್ವಯ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಒಂದೇ ಅಥವಾ ಪ್ರತ್ಯೇಕ ಅಧ್ಯಯನ ಮಂಡಳಿಗಳನ್ನು ಹೊಂದುವ ಕುರಿತು ಸಕ್ಷಮ ಪ್ರಾಧಿಕಾರಗಳು ತೀರ್ಮಾನಿಸಬಹುದಾಗಿರುವುದರಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನಗಳಿಗೆ ಒಂದೇ ಅಧ್ಯಯನ ಮಂಡಳಿ ಹಾಗೂ ಸಂಶೋಧನಾ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಯನ ಮಂಡಳಿ ಹೊಂದುವ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

| ವಿಷಯ ಸಂಖ್ಯೆ | 2022-23: ವಿ.ವಿ.ಪ:2 ಶೈ.ವಿ.:7 ದಿನಾಂಕ: 30.03.2023 |
|---|---|

**ವಿಷಯ: ಸ್ನಾತಕೋತ್ತರ ನಾಲ್ಕು ವಿಷಯಗಳ ಪಠ್ಯಕ್ರಮದ ಪರಿಷ್ಕರಣೆ ಕುರಿತು.**

* * * * *

2023-24ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಸ್ನಾತಕೋತ್ತರ ಪಠ್ಯಕ್ರಮ ಪರಿಷ್ಕರಿಸಬೇಕಾದಲ್ಲಿ ಜನವರಿ-2023ರ ಒಳಗಾಗಿ ಅಧ್ಯಯನ ಮಂಡಳಿ ಸಭೆ ನಡೆಸಿ ಸಭಾ ನಡಾವಳಿಯೊಂದಿಗೆ ಪರಿಷ್ಕೃತ ಪಠ್ಯಕ್ರಮವನ್ನು ಸಲ್ಲಿಸುವಂತೆ ದಿನಾಂಕ: 18.11.2022ರ ಸುತ್ತೋಲೆಯಲ್ಲಿ ಎಲ್ಲಾ ಸ್ನಾತಕೋತ್ತರ ಅಧ್ಯಯನ ಮಂಡಳಿಗಳಿಗೆ ತಿಳಿಸಲಾಗಿರುತ್ತದೆ.

ಸದರಿ ಸುತ್ತೋಲೆಯನ್ವಯ ಕೆಳಕಂಡ ನಾಲ್ಕು ಸ್ನಾತಕೋತ್ತರ ವಿಷಯಗಳ ಪಠ್ಯಕ್ರಮದ ಪರಿಷ್ಕರಣೆ ಪ್ರಸ್ತಾವನೆಗಳು ಸ್ವೀಕೃತಿಯಾಗಿರುತ್ತದೆ.

1. **ಸ್ನಾತಕೋತ್ತರ ಪರಿಸರ ವಿಜ್ಞಾನ**
2. **ಸ್ನಾತಕೋತ್ತರ ಭೌತಶಾಸ್ತ್ರ**
3. **ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ**
4. **ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವ**

ಕ್ರಮ ಸಂಖ್ಯೆ: 1) ರಲ್ಲಿನ ಸ್ನಾತಕೋತ್ತರ ಪರಿಸರ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಕೆಳಕಂಡ ಅಂಶಗಳನ್ನು ಅವಗಾಹನೆಗೆ ತರಲಾಗಿದೆ.

- ಅಧ್ಯಯನ ಮಂಡಳಿಯು Compulsory Non-credits Skill based and value added courses ಪ್ರಾರಂಭಿಸಲು ಶಿಫಾರಸ್ಸನ್ನು ಮಾಡಿ ಸದರಿ ಕೋರ್ಸುಗಳ ಪಠ್ಯಕ್ರಮವನ್ನು ಅನುಮೋದಿಸಿರುತ್ತದೆ. 2ನೇ ಸೆಮಿಸ್ಟರ್‌ನ Ocupational health & safety (Non-credit) & 3ನೇ ಸೆಮಿಸ್ಟರ್‌ನ Technology for Sustainable development ಕೋರ್ಸುಗಳನ್ನು ವಿಭಾಗದ ಅಂತದಲ್ಲಿ ಪ್ರಾರಂಭಿಸಲು ಹಾಗೂ ಅದರ ಗ್ರೇಡ್‌ಗಳನ್ನು ವಿದ್ಯಾರ್ಥಿಯ ಅಂಕಪಟ್ಟಿಯಲ್ಲಿ ಅಳವಡಿಸಲು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ನಿರ್ದೇಶನ ನೀಡಲು ಕೋರಿರುತ್ತಾರೆ.
- ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯು M.Sc. Environmental Scienceಅನ್ನು M.Sc. in Ecology & Environmental Science ಎಂದು ಪರಿವರ್ತಿಸಲು ಶಿಫಾರಸ್ಸು ಮಾಡಿದೆ. ಆದ್ದರಿಂದ 2023-24ರ ಶೈಕ್ಷಣಿಕ ಸಾಲಿನಿಂದ Course Titleಅನ್ನು Change ಮಾಡಲು ಕೋರಿದ್ದು, ಸದರಿ ಕೋರ್ಸ್ UGC List of Approved Degrees Regulations Amendment – 2018 ಅಡಿಯಲ್ಲಿಯೂ ಇರುತ್ತದೆ. ಉಲ್ಲೇಖಿಸಿರುವ ಕೋರ್ಸ್ ಹಲವಾರು ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಯಶಸ್ವಿಯಾಗಿ ನಡೆಯುತ್ತಿದೆ.

ಮೇಲ್ಕಂಡ ಅಂಶಗಳ ಕುರಿತು ಸ್ವೀಕೃತಿಯಾಗಿರುವ ನಾಲ್ಕು ಸ್ನಾತಕೋತ್ತರ ವಿಷಯಗಳ ಪರಿಷ್ಕೃತ ಪಠ್ಯಕ್ರಮಗಳನ್ನು 2023-24ನೇ ಶೈಕ್ಷಣಿಕ ಸಾಲಿಗೆ ಅಳವಡಿಸಿಕೊಳ್ಳಲು ವಿದ್ಯಾ ವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.